ತರಗತಿ : 10 ನೆಯ ಅಧ್ಯಾಯ : ಧಾತುಗಳ ಆವರ್ತನೀಯ ವರ್ಗೀಕರಣ ವಿಷಯ : ವಿಜ್ಞಾನ

**ಸರ್ಕಾರಿ ಪ್ರೌಢಶಾಲೆ ಕೋಳಕೂರ, ತಾ. ಜೇವರ್ಗಿ, ಜಿ. ಕಲಬುರಗಿ**

**ರಚನೆ : ಸಚಿನ್ ಕುಮಾರ ಹಿರೇಮಠ, ಸಹಶಿಕ್ಷಕರು.**

1.ಮೊದಮೊದಲು ಆವರ್ತಕ ಕೋಷ್ಠಕಗಳ ತಯಾರಿಕೆಯಲ್ಲಿ ರಸಾಯನ ವಿಜ್ಞಾನಿಗಳು ಮುಖ್ಯವಾಗಿ ಪರಿಗಣಿಸಿದ್ದು....?

ಅ) ಪರಮಾಣು ಸಂಖ್ಯೆ ಬ)ಪರಮಾಣು ರಾಶಿ ಕ)ಇಲೆಕ್ಟ್ರಾನ್ ವಿನ್ಯಾಸ ಡ)ಪರಮಾಣು ಗಾತ್ರ

2. ಇವುಗಳಲ್ಲಿ ಡೋಬರೈನರ್ ನ ತ್ರಿವಳಿಗಳು

ಅ)Na, Ca, Al ಬ) Li, B, Be ಕ) Ca, Sr, Ba ಡ)N,P,Au

3. A,B ಮತ್ತು C ಧಾತುಗಳನ್ನು ಅವುಗಳ ಪರಮಾಣು ರಾಶಿಯ ಏರಿಕೆ ಕ್ರಮದಲ್ಲಿ ಬರೆದಾಗ, Aಧಾತುವಿನ ರಾಶಿ 35.5, B ಧಾತುವಿನ ರಾಶಿ 79.9 ಆದರೆ C ಧಾತುವಿನ ರಾಶಿ ಯಾವುದಕ್ಕೆ ಸರಿ ಸುಮಾರು ಸಮವಿದೆ?

ಅ)137 ಬ)74.9 ಕ) 87.6 ಡ) 126.9

4. ಅಷ್ಟಕಗಳ ನಿಯಮವನ್ನು ಪ್ರತಿಪಾದಿಸಿದ ವಿಜ್ಞಾನಿ

ಅ)ಜಾನ್ ನ್ಯೂಲಾಂಡ್ ಬ)ಡೋಬರೈನರ್ ಕ)ಡಿಮಿತ್ರಿ ಮೆಂಡಲೀವ್ ಡ)ಮೋಸ್ಲೆ

5. ಅಷ್ಟಕ ನಿಯಮದ ಪ್ರಕಾರ

ಅ)ಪ್ರತಿ 10 ನೆಯ ಧಾತು ಒಂದನೆಯ ಧಾತುವಿನ ಆವರ್ತ
ಬ)ಪ್ರತಿ 9 ನೆಯ ಧಾತು ಒಂದನೆಯ ಧಾತುವಿನ ಆವರ್ತ
ಕ) ಪ್ರತಿ 8 ನೆಯ ಧಾತು ಒಂದನೆಯ ಧಾತುವಿನ ಆವರ್ತ
ಡ) ಪ್ರತಿ 7 ನೆಯ ಧಾತು ಒಂದನೆಯ ಧಾತುವಿನ ಆವರ್ತ

6. ಮೆಂಡಲೀವ್ ನ ಆವರ್ತಕ ಕೋಷ್ಟಕದ ಸಾಧನೆಗಳಲ್ಲಿ ಇದು ಒಳಗೊಂಡಿಲ್ಲ.

ಅ)ಆವರ್ತ ಮತ್ತು ಗುಂಪುಗಳ ರಚನೆ
ಬ)ಹೈಡ್ರೋಜನ್ ಗೆ ನಿರ್ದಿಷ್ಟ ಸ್ಥಾನ ನೀಡಿದ್ದು
ಕ)ಮುಂದೆ ಕಂಡು ಹಿಡಿಯಬಹುದಾದ ಧಾತುಗಳಿಗಾಗಿ ಸ್ಥಾನ ನಿಗದಿಪಡಿಸಿದ್ದು
ಡ) ಏಕ ಎಂಬ ಪೂರ್ವ ಪ್ರತ್ಯಯ ಸೇರಿಸಿ, ಧಾತು ಊಹೆ ಮಾಡಿದ್ದು

7. ಆಧುನಿಕ ಆವರ್ಕಕ ಕೋಷ್ಠಕದಲ್ಲಿ ಧಾತುಗಳ ಜೋಡಣೆಯು ಇದರ ಅನುಗುಣವಾಗಿದೆ.

ಅ) ಪರಮಾಣು ಸಂಖ್ಯೆ ಬ)ಪರಮಾಣು ರಾಶಿ ಕ)ಇಲೆಕ್ಟ್ರಾನ್ ವಿನ್ಯಾಸ ಡ)ಪರಮಾಣು ಗಾತ್ರ

8. ಆಧುನಿಕ ಆವರ್ತಕ ಕೋಷ್ಟಕದಲ್ಲಿನ ಅಡ್ಡ ಸಾಲುಗಳನ್ನು ಹೀಗೆನ್ನುತ್ತಾರೆ.

ಅ) ಚೌಕಗಳು ಬ)ಗುಂಪುಗಳು ಕ)ಆವರ್ತಗಳು ಡ) ವೃತ್ತಗಳು

9. ಆಧುನಿಕ ಆವರ್ತಕ ಕೋಷ್ಟಕದಲ್ಲಿನ ಕಂಬ ಸಾಲುಗಳನ್ನು ಹೀಗೆನ್ನುತ್ತಾರೆ.

ಅ) ವೃತ್ತಗಳು ಬ)ಚೌಕಗಳು ಕ)ಆವರ್ತಗಳು ಡ)ಗುಂಪು/ವರ್ಗಗಳು

10. ಆಧುನಿಕ ಆವರ್ತಕ ಕೋಷ್ಟಕದಲ್ಲಿ ಒಟ್ಟು ಆವರ್ತಗಳ ಹಾಗೂ ಗುಂಪುಗಳ ಸಂಖ್ಯೆ..

ಅ)7 ಆವರ್ತಗಳು, 18 ಗುಂಪುಗಳು
ಬ) 18 ಆವರ್ತಗಳು, 7 ಗುಂಪುಗಳು
ಕ)6 ಆವರ್ತಗಳು 13 ಗುಂಪುಗಳು
ಡ) 13 ಆವರ್ತಗಳು, 6 ಗುಂಪುಗಳು

LIVEWORKSHEETS